# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1646

ಸದಸ್ಯರ ಹೆಸರು :ಶ್ರೀ ಎಸ್ ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ :18.03.2026

ಉತ್ತರಿಸುವ ಸಚಿವರು :ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969 ರನ್ವಯ ಗುತ್ತಿಗೆ ಅವಧಿಯ ಮಾನದಂಡಗಳೇನು; ಸದರಿ ಗುತ್ತಿಗೆ ಅವಧಿಯು 10 ವರ್ಷಗಳು ಮೀರಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಮತ್ತು ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಭೂಮಿಗೆ ಪಾವತಿಸಬೇಕಾದ ಬಾಡಿಗೆಯನ್ನು ನಿಗಧಿಗೊಳಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19 ರಲ್ಲಿ ಗುತ್ತಿಗೆ ಅವಧಿಯ ಮಾನದಂಡಗಳು ನಿರ್ದಿಷ್ಟಪಡಿಸಲಾಗಿದೆ.<br>ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19 (3) ರನ್ವಯ ಭೂಮಿಗಳನ್ನು ಗುತ್ತಿಗೆಗೆ ಕೊಡಬಹುದಾದ ಅವಧಿಯು (ಎ) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೇ, ಒಬ್ಬ ವ್ಯಕ್ತಿಯ, ಕಂಪನಿಯ ಅಥವಾ ಸಂಘದ ಸಂದರ್ಭದಲ್ಲಿ (ಹತ್ತು ವರ್ಷಗಳಿ)ಗಿಂತ ಹೆಚ್ಚಾಗಿರತಕ್ಕದ್ದಲ್ಲ; ಮತ್ತು (ಬಿ) ಇತರ ಸಂದರ್ಭಗಳಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆ ಮತ್ತು ಮೂವತ್ತು ವರ್ಷಗಳಿಗಿಂತ ಹೆಚ್ಚಾಗಿ ಇರತಕ್ಕದ್ದಲ್ಲ: ಎಂದು ತಿಳಿಸಲಾಗಿದೆ.<br>ಅದರಂತೆಯೇ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19 (4) (ಬಿ) ರನ್ವಯ ಬೇಸಾಯೇತರ ಉದ್ದೇಶಕ್ಕಾಗಿ ಗೇಣಿಗೆ ಕೊಡಲಾದ ಭೂಮಿಗಳ ಸಂಬಂಧದಲ್ಲಿ, ಆ ಭೂಮಿ ಇರುವ ಸ್ಥಳವನ್ನು, ಯಾವ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸಲಾಗಿದೆಯೋ ಆ ಉದ್ದೇಶವನ್ನು ಗಣನೆಗೆ ತೆಗೆದುಕೊಂಡು ಅಂಥ ಭೂಮಿಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಗುತ್ತಿಗೆಯನ್ನು ಡೆಪ್ಯುಟಿ ಕಮೀಷನರು ಗೊತ್ತು ಮಾಡತಕ್ಕದ್ದು. ಪ್ರತಿಯೊಂದು ಸಂದರ್ಭವನ್ನು ಗಮನಿಸಿ, ತಾನು ಅವಶ್ಯಕವೆಂದು ಭಾವಿಸುವಂಥ ಷರತ್ತುಗಳನ್ನು ಸಹ ಅವನು ವಿಧಿಸಬಹುದು ಎಂದು ತಿಳಿಸಲಾಗಿದೆ. |

| | | |
|---|---|---|
| ಆ) | ಗುಂಜೂರು ಗ್ರಾಮದಲ್ಲಿ 6 ಎಕರೆ ಭೂಮಿಯನ್ನು ಮ:ಗುಂಜೂರು ಕ್ಲಬ್‌ಗೆ 30 ವರ್ಷಗಳಿಗೆ 22ನೇ ಮೇ 2013 ರಿಂದ ಗುತ್ತಿಗೆ ನೀಡಲು ಡಿಸೆಂಬರ್ 2012 ರಂದು ಸರ್ಕಾರವು ಅನುಮೋದಿಸಿರುವುದು ಸರ್ಕಾರದ ಗಮನದಲ್ಲಿದೆಯೇ; ಎಕರೆ ಒಂದಕ್ಕೆ ರೂ 6 ಲಕ್ಷದಂತೆ ಪ್ರತಿ 2 ವರ್ಷಗಳಿಗೆ ಒಂದು ಸಲ ಶೇಕಡ 10 ರಂತೆ ಹೆಚ್ಚಿಸುವ ಷರತ್ತಿನೊಂದಿಗೆ ನಿಗದಿಪಡಿಸಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/258/ಎಲ್‌ಜಿಬಿ/2012 ದಿನಾಂಕ: 22-12-2012 ರಂತೆ ಗುಂಜೂರು ಕ್ಲಬ್ ರವರಿಗೆ ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸ.ನಂ. 71 ಹಾಗೂ 72 ರಲ್ಲಿನ 6-00 ಎ/ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 19 (1) ಮತ್ತು 19 (3) ರನ್ವಯ ಪ್ರಚಲಿತ ಮಾರುಕಟ್ಟೆ ದರದ ಮೇಲೆ ಪ್ರತಿ ಒಂದು ಎಕರೆಗೆ ರೂ.60.00 ಲಕ್ಷ ರೂಗಳಿದ್ದು, ಸದರಿ ದರದ ಮೇಲೆ ಶೇ.10% ರಷ್ಟು ವಿಧಿಸಿ ಆ ಮೊತ್ತವನ್ನು ಪ್ರತಿ 2 ವರ್ಷಗಳಿಗೊಮ್ಮೆ ಶೇ.10% ರಷ್ಟು ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತು ವಿಧಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿರುತ್ತದೆ. |
| ಇ) | ಅವಧಿಯು ಮುಗಿದುಹೋಗಿದ್ದ, ಮೊದಲ ವರ್ಷದ ಗುತ್ತಿಗೆ ಅವಧಿಗೆ ವರ್ಷ ಒಂದಕ್ಕೆ 24 ಲಕ್ಷ ಮೊತ್ತದ ರಾಜಸ್ವ ನಷ್ಟವಾಗಿದ್ದು, ಇದರಿಂದಾಗಿ ಗುತ್ತಿಗೆ ಅವಧಿಯಲ್ಲಿ ಸರ್ಕಾರಕ್ಕೆ ಪುನರಾವರ್ತಕ ನಷ್ಟ ಸಂಭವಿಸಿದ್ದು, ಮಾರ್ಗಸೂಚಿ/ಮಾರುಕಟ್ಟೆ ಬೆಲೆ ಪ್ರಕಾರ ಬಾಡಿಗೆಯನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ವಸೂಲಾತಿ ಮಾಡಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಗಂಜೂರು ಕ್ಲಬ್ ಸಂಸ್ಥೆಯು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19 (3) ರಲ್ಲಿ ವಿವರಿಸಿರುವಂತೆ (3) the period for which lands may be leased under this rule shall not; (a) except with previous sanction of the State Government be more than (ten years) in the case of an individual, company or association and (b) be less than ten years and more than thirty years, in other cases: Provided that the Deputy Commissioner shall be competent torenew the lease after expiry of this period for a further period of five years.<br>ಮೇಲ್ಕಂಡ ನಿಯಮಗಳನ್ವಯ ಒಬ್ಬ ವ್ಯಕ್ತಿ ಕಂಪನಿ, ಸಂಘಕ್ಕೆ 10 ವರ್ಷಗಳಿಗೆ ಮೀರಿ ಸರ್ಕಾರಿ ಜಮೀನನ್ನು ಗುತ್ತಿಗೆ ಆಧಾರದಲ್ಲಿ ನೀಡಲು ಅವಕಾಶವಿರುವುದಿಲ್ಲ. ಇದಲ್ಲದೆ ಗುಂಜೂರು ಕ್ಲಬ್ ಸಂಸ್ಥೆಯವರು 10 ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ಕ್ಲಬ್ ಚಟುವಟಿಕೆಗಳನ್ನು ನಡೆಸಿರುತ್ತಾರೆ. ಸದರಿ ನಿಯಮ |

| | | |
|---|---|---|
| | | ಉಲ್ಲಂಘನೆಯಾಗಿರುವುದು ಕಂಡುಬಂದಿದ್ದು, ಗುಂಜೂರು ಕ್ಲಬ್ ಸಂಸ್ಥೆಗೆ 30 ವರ್ಷ ಅವಧಿಗೆ ಮಂಜೂರು ಮಾಡಲಾಗಿರುವ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ/258/ಎಲ್‌ಜಿಬಿ/2012 ದಿನಾಂಕ: 22-12-2012 ನ್ನು ರದ್ದುಪಡಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಈ) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 10 ವರ್ಷಗಳ ಗುತ್ತಿಗೆ ಅವಧಿಗೆ ಕಂದಾಯ ಇಲಾಖೆಯಿಂದ ಭೂಮಿಯನ್ನು ಪಡೆದುಕೊಂಡಿರುವವರ ಮತ್ತು ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಪಡೆಯಲಾಗಿರುವ ಮಾಹಿತಿಯನ್ನು ನೀಡುವುದು; 10 ವರ್ಷಗಳ ಗುತ್ತಿಗೆ ಅವಧಿಯು ಮೀರಿದ್ದರೂ ಸಹ ಸರ್ಕಾರದ ಪೂರ್ವಾನುಮತಿ ಪಡೆಯದೇ ಭೂಮಿಯನ್ನು ಬಳಸುತ್ತಿರುವವರ ಸಂಪೂರ್ಣವಾದ ಮಾಹಿತಿ ನೀಡುವುದು? | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 10 ವರ್ಷಗಳ ಗುತ್ತಿಗೆ ಅವಧಿಗೆ ಕಂದಾಯ ಇಲಾಖೆಯಿಂದ ಭೂಮಿಯನ್ನು ಪಡೆದುಕೊಂಡಿರುವವರ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಸಂಖ್ಯೆ: ಆರ್‌ಡಿ 79 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ | ಸಂಸ್ಥೆ ಹೆಸರು | ಗುತ್ತಿಗೆ ನೀಡಿರುವ ವರ್ಷ | ಗುತ್ತಿಗೆ ಅವಧಿ ಮುಗಿದಿದೆಯೇ? | ಗುತ್ತಿಗೆ ಅವಧಿ ಮುಗಿದಲ್ಲಿ ಕೈಗೊಂಡ ಕ್ರಮ | ಷರಾ |
|---|---|---|---|---|---|---|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು ಪೂರ್ವ | ಕ್ಯಾಲಸನಹಳ್ಳಿ | 53 | 3-00 | ಆಕೃಷ್ಟ ಸಂಸ್ಥೆ | 2019 | ಮುಗಿದಿದೆ. | ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. | ಗುತ್ತಿಗೆ ಅವಧಿ ಮುಗಿದಿರುವ ಕಾರಣ ಸದರಿ ಸ್ವತ್ತನ್ನು ಸರ್ಕಾರದ ಸುಪರ್ದಿಗೆ ಪಡೆಯುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| 2 | | ಬೆಂಗಳೂರು ಉತ್ತರ | ಕಸಬಾ (ಹೋಬಳಿ) | | | ರಜತಾ ಕಾಂಪ್ಲೆಕ್ಸ್ ಟೆನೆಂಟ್ಸ್ ವೆಲ್ ಫೇರ್ ಅಸೋಸಿಯೇಷನ್ (ರಿ) | 2011 | ಮುಗಿದಿದೆ. | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/663/ಎಲ್ ಜಿಬಿ/2022 ಬೆಂಗಳೂರು ದಿ: 19-09-2023 ರಂತೆ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಸದರಿ ಸ್ವತ್ತನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22(ಎ)(3)(i) ರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಉಚಿತವಾಗಿ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. | ಗುತ್ತಿಗೆ ರದ್ದುಪಡಿಸಿ ಶಿಕ್ಷಣ ಇಲಾಖೆ ನೀಡಲಾಗಿರುವ ಮಾನ್ಯ ಸರ್ಕಾರದ ಆದೇಶದ ವಿರುದ್ಧ ಸದರಿ ಅಸೋಸಿಯೇಷನ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರ.ಸ. WP-28006/2023 ರಂತೆ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದ ದೈನಂದಿನ ಆದೇಶದಲ್ಲಿ "Till the State files its objections, the petitioners shall not be dispossessed" ಎಂದು ಆದೇಶವಾಗಿರುತ್ತದೆ. |
| 3 | | ಬೆಂಗಳೂರು ದಕ್ಷಿಣ | ಸೋಮನ ಹಳ್ಳಿ | 225 | 33-00 | ಆಚಾರ್ಯ ಪಾಠಶಾಲಾ ಸಂಸ್ಥೆ | 1962 | ಮುಗಿದಿದೆ | ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ/333/ಎಲ್ ಜಿಬಿ/2016 ದಿನಾಂಕ: 21-04-2017 ರಂತೆ ಗುತ್ತಿಗೆ ಷರತ್ತನ್ನು ಉಲ್ಲಂಘಿಸಿರುವ ಕಾರಣ ನಿಯಮಾನುಸಾರ ಕ್ರಮ ಕೈಗೊಳ್ಳಲು ಸರ್ಕಾರವು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತದೆ. | ಸದರಿ ನಿರ್ದೇಶನದ ವಿರುದ್ಧ ಸದರಿ ಸಂಸ್ಥೆ ರವರು ಉಚ್ಚ ನ್ಯಾಯಾಲಯದಲ್ಲಿ WP-18860/2017 ರಂತೆ ಪ್ರಕರಣ ದಾಖಲಿಸಿದ್ದು, ವಿಚಾರಣಾ ಹಂತದಲ್ಲಿರುತ್ತದೆ. |
| 4 | | ಯಲಹಂಕ | ಯಲಹಂಕ ತಾಲ್ಲೂಕು ವ್ಯಾಪ್ತಿಯಲ್ಲಿ 10 ವರ್ಷಗಳ ಗುತ್ತಿಗೆ ಅವಧಿಗೆ ಮಂಜೂರು ಮಾಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. | | | | | | | | |
| 6 | | ಆನೇಕಲ್ | ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ 10 ವರ್ಷಗಳ ಗುತ್ತಿಗೆ ಅವಧಿಗೆ ಮಂಜೂರು ಮಾಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. | | | | | | | | |